ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 6, January - February 2025, Pp. 86-91
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಬಸವಣ್ಣನವರ ವಚನಗಳಲ್ಲಿ ನಿಜ ಭಕ್ತಿಯ ಪರಾಕಾಷ್ಠತೆ

**ಡಾ.ಎಸ್.ಬಿ. ರಾಠೋಡ**
ಪ್ರಾಚಾರ್ಯರು ಮತ್ತು ಕನ್ನಡ ಸಹ ಪ್ರಾಧ್ಯಾಪಕರು ಹಾಗೂ ಸಂಶೋಧನಾ ಮಾರ್ಗದರ್ಶಕರು (ಕನ್ನಡ.ವಿ.ವಿ),
ಎಸ್. ಎಸ್. ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಚಡಚಣ.

**Abstract:**
*ಶರಣರು ನಡೆ–ನುಡಿಯಲ್ಲಿ ಸರಳತೆಯನ್ನು ಕಂಡವರು. ಜನರ ದು:ಖ ದುಮ್ಮಾನಗಳಲ್ಲಿ ಭಾಗಿಯಾಗಿ ಅವರಿಗೆ ಧೈರ್ಯ ತುಂಬಿದರು. ಸರಳತೆಯ ಮೂಲಕ ಭಕ್ತಿಯ ಮಾರ್ಗ ತೋರಿಸಿಕೊಟ್ಟವರು. ಪಕ್ಷಿ, ಪ್ರಾಣಿಗಳಲ್ಲಿ ಇರುವ ಮಾನವಿಯತೆ ಎತ್ತಿಹಿಡಿದವರು. ಕಂದಾಚಾರ, ಮೂಢ ನಂಬಿಕೆ, ಇವುಗಳಿಂದ ದೂರವಿರುವ ವಿಚಾರ ಪಸರಿಸಿದವರು. ನಂಬಿದ ದೈವವನ್ನೇ ತನು, ಮನ ಅರ್ಪಿಸಿ ನೀನೇ ಕಾಪಾಡು ದೇವಾ ಎಂದು ಶ್ರದ್ಧೆಯಿಂದ ತಮ್ಮ ಬದುಕು ಸಾಗಿಸಿದವರು, ಹಾಗೆಯೇ ಪ್ರತಿಯೊಬ್ಬ ಮನುಷ್ಯ ತನ್ನ ಕಾಯಕದ ಬಗ್ಗೆ ಶ್ರದ್ಧಾ ಭಕ್ತಿವುಳ್ಳವನಾಗಿರಬೇಕು ಎಂಬ ಹತ್ತು ಹಲವಾರು ಭಕ್ತಿಯ ಪರಾಕಾಷ್ಠತೆ ಈ ಲೇಖನದಲ್ಲಿ ಉಲ್ಲೇಖಿಸಲಾಗಿದೆ.*

**Keywords:** *ಕನ್ನಡ ಸಾಹಿತ್ಯ. ಶರಣ ಸಾಹಿತ್ಯ, ಶಿವ ಶರಣರು, ಬಸವಣ್ಣ, ಭಕ್ತಿ ಭಂಡಾರಿ.*

## ಪೀಠಿಕೆ

ಹನ್ನೆರಡನೆಯ ಶತಮಾನದಲ್ಲಿ ಜನ ಸಾಮಾನ್ಯರ ತನು–ಮನ ಬೆಳಗಿದ ಸಾಹಿತ್ಯವೆಂದರೆ ವಚನ ಸಾಹಿತ್ಯ. ರಾಜ ಮನೆತನಕ್ಕೆ ಸಿಮೀತವಾದ ಪಂಡಿತರ ಸಾಹಿತ್ಯ, ಸರಳ, ಸುಲಲಿತವಾಗಿ ಜನಮಾನಸರ ಸಂಪರ್ಕಕ್ಕೆ ಬಂದು; ಬಡವ, ಶ್ರೀಮಂತ ಎಂಬ ಬೇಧ ಭಾವವನ್ನು ತೊರೆದು ಮುಗಿಲೆತ್ತರಕ್ಕೆ ಬೆಳೆಯಿತು. ಪದ್ಯ–ಗದ್ಯಗಳ ನಡುವೆ ಉಯ್ಯಾಲೆಯಾಡುವ ವಚನಗಳು, ಕನ್ನಡ ಸಾಹಿತ್ಯದ ಒಂದು ವಿಶಿಷ್ಠ ಪ್ರಕಾರವಾಗಿ ಎಲ್ಲರ ಹೃದಯಕ್ಕೆ ಲಗ್ಗೆಯಿಟ್ಟಿತು. "ಆನು ಹಾಡಿದೆನಲ್ಲದೆ ಸೈರಿಸಲಾರೆನಯ್ಯ" ಎಂಬ ಅಂತರಂಗದ ಒತ್ತಡ ಎಲ್ಲ ವಿಧದಲ್ಲೂ "ಲೇಸೆನಿಸಿಕೊಂಡು ಬದುಕಬೇಕೆಂಬ ಬಹಿರಂಗದ ತುರ್ತು" ವಚನ ರಚನೆಗಳಿಗೆ ಮುಖ್ಯ ಪ್ರೇರಕ ಶಕ್ತಿಯಾಯಿತು. ಹೀಗಾಗಿ ಶರಣರ ರಚನೆಗಳು ಬರಿ ಬರವಣಿಗೆಯಾಗಿ ಉಳಿಯದೆ ನಡೆ–ನುಡಿಯೊಂದಾಗಿ ಬಹುಮಹತ್ವದ ವಚನಗಳಾಗಿ, ದೈವ, ಧರ್ಮ, ಭಕ್ತಿ, ಶಕ್ತಿ ಕೇಂದ್ರಗಳಂತೆ ಹೊಳಪನ್ನು ನೀಡಿದವು.

ವಚನ ಅಂದರೆ ಪ್ರತಿಜ್ಞೆ, ಭಾಷೆ ಕೊಡು, ಮಾತು ಕೊಡು, ನಾನು ಹೀಗೆ ನಡೆಯುತ್ತೇನೆ ಎಂದು ತನ್ನಷ್ಟಕ್ಕೆ ತಾನು ಬೇಲಿ ಹಾಕಿ ಮನಸ್ಸು ಎಲ್ಲೂ ಹೋಗದಂತೆ, ನಂಬಿದ ದೈವವನ್ನು ಸಾಕ್ಷಿಯಾಗಿಟ್ಟುಕೊಂಡು ಆಣೆ ಗೈಯುವನು. 'ಹೊನ್ನಿನೊಳಗೊಂದೆರೆಯ ಸೀರೆಯೊಳಗೊಂದೆಳೆಯ' ಬೇಕೆನ್ನದ ಆಣೆ. ಹೀಗೆ ತಪ್ಪಿ ನಡೆದರೆ ತಲೆ ದಂಡ ಕೊಡುವೆ ಎಂದು ಶರಣರು ಪ್ರತಿಜ್ಞೆ ಗೈಯುವರು. ನಡೆಯಲ್ಲಿ ಬಾರದ್ದು ನುಡಿಯಲ್ಲಿ ತೋರದು. ನಡೆ–ನುಡಿ ಬಿನ್ನ ಕ್ರಿಯಗಳಲ್ಲ. ನುಡಿಯೊಳಗಾಗಿ ನಡೆ

***Please cite this article as:*** ರಾಠೋಡ, ಎಸ್.ಬಿ. (2025). ಬಸವಣ್ಣನವರ ವಚನಗಳಲ್ಲಿ ನಿಜ ಭಕ್ತಿಯ ಪರಾಕಾಷ್ಠತೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 3(6), 86–91

ಇದೆ. ನಡೆಯೊಳಗಾಗಿ ನುಡಿ ಇದೆ. ನಡೆಯೊಳಗಡಗಿ ಅದ್ವೈತವಾಗಿರುತ್ತದೆ. "ನುಡಿಯ ಗಡಣದ ಬೆಳಕು ಮರುತ ಪರಿಮಳದಂತೆ" ಹೀಗೆ ನಡೆ–ನುಡಿ ಸಾಮರಸ್ಯ ಸಾಧಿಸಿದ ಶರಣರು ಲೌಕಿಕರಿಗಾಗಿ ಮಾತನಾಡಿದರೂ ಆ ಮಾತು ತನ್ನೆಲ್ಲ ಕಾಳಿಕೆಯನ್ನು ಕಳೆದುಕೊಂಡು ಜ್ಯೋತೀರ್ಲಿಂಗವಾಗಿರುತ್ತದೆ. ಅಂತೆಯೇ ಬಸವಣ್ಣ "ಕೂಡಲ ಸಂಗನ ಶರಣರು ಮನದೆರೆದು ಮಾತನಾಡಿದರೆ ಲಿಂಗವೇ ಕಾಣಬಹುದು" ಎಂಬ ಭಕ್ತಿಯ ಪರಾಕಾಷ್ಠತೆಯನ್ನು ಮುಟ್ಟುತ್ತದೆ.

ನಚ್ಚಿದೆನೆಂದರೆ, ಮೆಚ್ಚಿದೆನೆಂದರೆ,
ಸಲೆಮಾರುವೋದೆನೆಂದರೆ

***ತನುವನಲ್ಲಾಡಿಸಿ ನೋಡುವೆ ನೀನು***
***ಮನವನಲ್ಲಾಡಿಸಿ ನೋಡುವೆ ನೀನು***
***ಧನವನಲ್ಲಾಡಿಸಿ ನೋಡುವೆ ನೀನು***
***ಇದಕ್ಕೆಲ್ಲ ಅಂಜದಿದ್ದರೆ ಭಕ್ತಿಕಂಪಿತ ನಮ್ಮ ಕೂಡಲ ಸಂಗಮದೇವಾ***

ಭಕ್ತ ಹೀಗೆ ಏಕ ನಿಷ್ಠೆಯಿಂದ ಕೂಡಿದರೆ ಮಾತ್ರ ಶಿವ ಭಕ್ತಿ–ಕಂಪಿತ. ಒಂದು ಅರ್ಥದಲ್ಲಿ ಭಕ್ತಿ ಬಹಳ ಸುಲಭ? ಎಲ್ಲರೂ ಅದನ್ನು ಸಾಧಿಸಬಹುದು; ಇನ್ನೊಂದು ಅರ್ಥದಲ್ಲಿ ಅದು ಬಹಳ ಕಷ್ಟ. ಅಚಲವಾದ ಕಠೋರ ನಿಷ್ಠೆಯಿಲ್ಲದ್ದಿದ್ದರೆ ಅದು ಫಲಕಾರಿಯಾಗದು. ಅದು ಎರಡು ಬಾಯಿಯ ಕತ್ತಿ, ಹೋಗುತ್ತಾ ಕೊಯ್ವುದು, ಬರುತ್ತಾ ಕೊಯ್ವುದು, ನಂಬಿ ಕರೆದರೆ ಮಾತ್ರ ಶಿವ 'ಓ' ಎನ್ನುತ್ತಾನೆ. ನಂಬದೆ ನೆಚ್ಚದೆ ಬರಿದೆ ಕರೆದರೆ ಆತನ ಕಿವಿಗೆ ಅದು ಬೀಳದು; ಹೃದಯಕ್ಕೆ ಅದು ತಾಗದು ಎಂಬುವುದು ಬಸವಣ್ಣನವರ ಭಕ್ತಿಯ ನಿಲುವು.

ಭಕ್ತಿಯಲ್ಲಿ ಭಾವಗಳಲ್ಲದೆ ಶ್ರವಣ, ಕೀರ್ತನ, ಸ್ಮರಣ ಪಾದ ಸೇವನ, ಅರ್ಚನ, ವಂದನಾ, ದಾಸ್ಯ, ಸಖ್ಯ ಮತ್ತು ಅರ್ಪಣ ಹೀಗೆ ಒಂಬತ್ತು ವಿಧಗಳನ್ನು ಹೇಳಲಾಗುತ್ತದೆ. ಭಕ್ತನ ಭಾವ ಪರಿಶುದ್ದಗೊಂಡು ಆ ವಿಶ್ವ ಶಕ್ತಿಯ ಕಂಪನಗಳನ್ನು ಆಕರ್ಷಿಸಿ ಅದಕ್ಕೆ ತಕ್ಕಂತೆ ಮಿಡಿಯಬಲ್ಲ ಶಕ್ತಿಯನ್ನು ಪಡೆಯಬೇಕಾದರೆ ಈ ಎಲ್ಲ ಸಾಧನೆಗಳೂ ಆವಶ್ಯಕ. ಆ ದೈವಶಕ್ತಿಯ ಮಹಿಮೆಯನ್ನು ಶ್ರವಣ ಮಾಡುವುದು, ಕೀರ್ತನೆಗಳನ್ನು ಹಾಡುವುದು, ಸ್ಮರಿಸುವುದು, ವಂದಿಸುವುದು, ಆ ಆನಂದದಲ್ಲಿ ಮೈಮರೆಯುವುದು, ಇವುಗಳ ಮೂಲಕ ಭಕ್ತ ತನ್ನ ಶಕ್ತಿಯನ್ನು ವಿಕಾಸಗೊಳಿಸಿಕೊಳ್ಳುತ್ತಾನೆ. ಇವುಗಳ ಅವಶ್ಯಕತೆಯನ್ನು ಮಹತ್ವವನ್ನೂ ಕುರಿತು ಬಸವಣ್ಣನವರು ತಮ್ಮ ವಚನಗಳಲ್ಲಿ ಮುಕ್ತಕಂಠದಿಂದ ಅದ್ಭುತವಾಗಿ ವಿವರಿಸಿ ಹೇಳಿದ್ದಾರೆ. ಒಟ್ಟಿನಲ್ಲಿ ಭಕ್ತನ ಮನೋಧರ್ಮಕ್ಕೆ ಆತನ ಪ್ರೇಮದ ತೀವ್ರತೆಗೆ ಸ್ವರೂಪಕ್ಕೆ ಮತ್ತು ತಾತ್ವಿಕ ಹಿನ್ನೆಲೆಗೆ ಅನುಗುಣವಾಗಿ ಅವನ ಭಕ್ತಿ ನಾನಾ ಮಾರ್ಗಗಳಲ್ಲಿ ನಿಜ ಭಕ್ತಿಯ ಒಲವುಗಳಾಗಿ ವ್ಯಕ್ತವಾಗುತ್ತವೆ.

ಸತ್ಯದಲ್ಲಿ ಸ್ವರ್ಗವಿದೆ, ಮಿಥ್ಯದಲ್ಲಿ ಮರ್ತ್ಯವಿದೆ. ಕಲ್ಪನೆಯ ಸಾಮ್ರಾಜ್ಯದ ಸ್ವರ್ಗನರಕಗಳನ್ನು ಬೆನ್ನು ಹತ್ತುವುದಕ್ಕಿಂತ ಸದಾಚಾರದಲ್ಲಿ ನಡೆ, ಸತ್ಯದಲ್ಲಿ ನುಡಿಗಳನ್ನಿರಿಸಿದ ಮರ್ತ್ಯವೆ ಮಹವಾಗುವುದೆಂದು ಸಾರಿದರು.

***ದೇವಲೋಕ ಮರ್ತ್ಯ ಲೋಕವೆಂಬುವುದು ಬೇರುಂಟೆ***
***ಈ ಲೋಕದೊಳಗೆ ಮತ್ತೆ ಅನಂತಲೋಕ ಶಿವಲೋಕ***
***ಶಿವಾಚಾರವಯ್ಯಾ ಭಕ್ತನಿರ್ದಡಾವೇ ದೇವಲೋಕ***
***ಭಕ್ತನಂಗಳವೇ ವಾರಣಾಸಿ ಕಾಯಕವೇ ಕೈಲಾಸ***
***ಇದು ಸತ್ಯ ಕೂಡಲಸಂಗಮದೇವಾ!***

ಜಗತ್ತಿನಲ್ಲಿ ಅರ್ಜಿತವಾಗಿ ಬದುಕುವ ಯಾವ ಯಾವ ಹೊಲಬುಂಟೊ ಅದೆಲ್ಲವೂ ಧರ್ಮವೆಂದನಿಸುತ್ತದೆಂದು ಬಸಣ್ಣನವರು ಭೋಧಿಸಿದರು ಬಾಳಿನುನ್ನತಿಗೆ ಬೇಕಾಗುವ ಉತ್ತಮೋತ್ತಮವಾದ ವಿಶಾಲವಾದ ನಿಯಮಗಳನ್ನು ನಿರೂಪಿಸಿದರು. ಸರ್ವ ಸಮತಾ ಭಾವವನ್ನು ಸಾರಿದರು. ಜ್ಞಾನ ಮಾರ್ಗದಷ್ಟೇ ಕ್ರಿಯಾ ಮಾರ್ಗಕ್ಕೆ ಪ್ರಾಶಸ್ತ್ಯವನ್ನು ಪ್ರತಿಪಾದಿಸಿದರು. ಪ್ರಾಕೃತಿಕ ಪ್ರಾಣ ಧರ್ಮವನ್ನೂ ಮೀರಿ ಪರಮಾರ್ಥಪರಮ ಚೈತನ್ಯ

ನಿಷ್ಠುರವಾಗಿರಬೇಕು ಇವೆರಡಕ್ಕೂ ಮಿಗಿಲಾಗಿ ಪ್ರಸಾದ ಮೆಚ್ಚಿ ತನ್ನಲ್ಲಿ ಸ್ವಾಯತ್ತವಾಗಿರಬೇಕು. ಪ್ರಸಾದವೆಂದರೆ ಪ್ರಸನ್ನ ಭಾವ ಸರ್ವದ್ವಂದ್ವ ಸರ್ವ ದುಃಖ ನಿವೃತ್ತಿ; ಪರಮಾತ್ಮನ ಪರಮಾನುಗ್ರಹ.

'ಅರ್ಥಪ್ರಾಣಾಭಿಮಾನದಲ್ಲಿ ವಂಚನೆಯಿಲ್ಲದ ಭಕ್ತಿ ಸಮಯಾಚಾರ' ಭಕ್ತಿಯಲ್ಲಿ ಅರ್ಥವಿರಬೇಕು ಅಭಿಮಾನವಿರಬೇಕು ಅಂದರೆ ಆ ದೇವರಿಗೆ ಒಪ್ಪುವುದು. 'ಒಡೆಯನ ಬರವಿಂಗೆ ಕುನ್ನಿಬಾಲವ ಬಡಿದಡೆ ವೆಚ್ಚೆವೇನು ಹುತ್ತುವುದು' ಇಂದು ಮನುಷ್ಯನಕ್ಕಿಂತ ಪ್ರಾಣಿಗಳಲ್ಲಿ ನಿಜವಾದ ಮಾನವೀಯ ಭಕ್ತಿ ಕಾಣುತ್ತಿದ್ದೇವೆ. ಒಡೆಯ ಬರುವ ಮುನ್ನ ಸೂಚನೆ ತಿಳಿದೊಡನೆ ನಾಯಿಯು ಬಾಲವನ್ನು ಅಲ್ಲಾಡಿಸುತ್ತಾ ನಿಷ್ಕಲ್ಮಶ ಭಾವದಿಂದ, ಮುಗ್ದ ಭಕ್ತಿಯಿಂದ ಸ್ವಾಗತ ಕೋರುವ ಪರಿ ಈ ವಚನದಲ್ಲಿ ಅಡಗಿಕೊಂಡಿದೆ. 'ಹತ್ತು ಸಾವಿರ ಗೀತವ ಹಾಡಿ ಅರ್ಥವಿಲ್ಲದೆ ಫಲವೇನು' ಹಾಡುವ ಹಾಡಿನಲ್ಲಿ ಮಾರ್ಮಿಕವಾದ ಭಕ್ತಿ ಇರಬೇಕು. ಭಕ್ತಿವಿಲ್ಲದೆ ಎಷ್ಟು ಸಾವಿರ ಹಾಡು ಬರೆದರೇನು? ಹಾಡಿದರೇನು ಕೂಡಲಸಂಗನು ಮೆಚ್ಚಲಾರನು. ಶರಣರ ಸಮಾಜದಲ್ಲಿ ಅಷ್ಟಮಧ, ಅರಿಷಡ್ ವರ್ಗಗಳ ತಮ್ಮ ಹಿಡಿತದಲ್ಲಿ ಇಟ್ಟುಕೊಂಡು ನವಸಮಾಜ ರಚನೆ ಮಾಡಿದರು. ಹಾಗೆಯೇ ನೋಡುವ ಕಣ್ಣುಗಳಾಗಲಿ, ಮಾತನಾಡುವ ಬಾಯಿಯಾಗಲಿ, ಕೇಳಿಸಿಕೊಳ್ಳುವ ಕಿವಿಗಳಾಗಲಿ, ಸುವಾಸನೆ ಗ್ರಹಿಸುವ ಮೂಗಾಗಲಿ ಇವು ಎಲ್ಲವು ನಡೆ–ನುಡಿಯ ಹಿಡಿತದಲ್ಲಿ ಇಟ್ಟುಕೊಂಡರೆ ಸಮಾಜದಲ್ಲಿ ಸನ್ಮಾರ್ಗ, ಶಾಂತಿ ಸಂತೋಷ ನಮ್ಮವರು, ನಿಮ್ಮವರು ಎಲ್ಲರೂ ಸುಖಿ ಜೀವನ ನಡೆಸಬಹುದು ಎಂಬ ಬಹುದೊಡ್ಡ ಆಸೆ ಅವರಲ್ಲಿತ್ತು. 'ಅವರ ನಡೆಯೊಂದು ನುಡಿಯೊಂದಾದಡೆ ಶಿವಾಚಾರಕ್ಕವರು ಸಲ್ಲರಯ್ಯಾ' ವಚನಕಾರರು ಪ್ರಾಣತ್ತೆತರು ಖರೆ ನಡೆ–ನುಡಿಯಲ್ಲಿ ಬದಲಾವಣೆ ಮಾಡಿಕೊಳ್ಳಲಿಲ್ಲ. ಒಂದುವೇಳೆ ನಡೆ–ನುಡಿಯಲ್ಲಿ ಬದಲಾವಣೆಗೊಂಡರೆ ಅವರು ನಿಜವಾದ ಶರಣರು ಅಲ್ಲ ಭಕ್ತರು ಅಲ್ಲ.

*ಅಳೆವುತ್ತ ಅಳೆವುತ್ತ ಬಳಲುವರಲ್ಲದೆ, ಕೊಳಗ ಬಳಲುವುದೆ?*

*ನೆಡೆವುತ್ತ ನಡೆವುತ್ತ ಬಳಲುವರಲ್ಲದೆ, ಬಟ್ಟೆ ಬಳಲುವುದೆ?*

*ಶ್ರಮವ ಮಾಡುತ್ತಾ ಮಾಡತ್ತಾ ಬಳಲುವರಲ್ಲದೆ, ಕೋಲು ಬಳಲುವುದೆ?*

*ನಿಜವನರಿಯದ ಭಕ್ತ ಬಳಲುನಲ್ಲದೆ, ಲಿಂಗ ಬಳಲುವುದೆ ಕೂಡಲಸಂಗಮದೇವಾ.*

ಭಕ್ತನಾದವನು ನಿಜ ಭಕ್ತಿಯ ಹಾದಿಯಲ್ಲಿ ಅರಿತು ನಡೆದರೆ ಭವಸಾಗರವನ್ನು ಪಾರು ಮಾಡಿಕೊಳ್ಳುತಾನೆ. ದಣಿವು ಆತನಿಂದ ದೂರ ಸರಿದು ನಿಲ್ಲುತ್ತದೆ. ನಡೆಯುವ 'ಮಾರ್ಗ ಸತ್ಯದ ಹಾದಿ ತುಳಿಯುತ್ತದೆ. ಮನುಷ್ಯನ ಅಂತರಂಗದ ಮಾಪನ ಮೇರು ಶಿಖರವನ್ನು ಮುಟ್ಟುತ್ತದೆ. 'ಲಿಂಗವು ಅಂತರಿಸಿದವಂಗೆ ಒಳುನುಡಿ ಏಕೆ? ಐದೆ–ಅಣಚಿಯಿಲ್ಲದವಳಿಂಗೆ ಸೌಭಾಗ್ಯದ ಹೂವಿನ ಬೊಟ್ಟೇಕೆ' ಲಿಂಗದಲ್ಲಿ ತಾನಾಗಿ, ತನ್ನಲ್ಲಿ ಲಿಂಗವು ಬೆರೆತುಕೊಂಡಂತೆ ಪೂಜೆ ಸಲ್ಲಿಸಬೇಕು ಹೊರ–ಒಳನುಡಿಗಳು ಲಿಂಗ ಪೂಜೆಗೆ ಮೀಸಲಿರಬೇಕು. ಡಾಂಭಿಕತನದ ಪೂಜೆ ಸಲ್ಲದು ಹಾಗೆಯೇ ಐದೆಯರಾದ ಸೌಭಾಗ್ಯವತಿ ಎಂಬ ಹೆಸರು ಬರಿ ಹೆಸರಾಗಿ ಉಳಿಯಬಾರದು ಐದೆಯರ ನಡೆ–ನುಡಿ ಹೂವಿನ ಪರಿಮಳದಷ್ಟೆ ಸಮಾಜಕ್ಕೆ ಉತ್ತಮವಾದ ಸಂಬಂಧದ ಹಾದಿಯನ್ನು ತೋರಿಸಿಕೊಡಬೇಕು; ಇಲ್ಲದಿದ್ದರೆ ಇವರೆಲ್ಲರು ಸಮಾಜಕ್ಕೆ ಕಂಟಕ ಇದ್ದ ಹಾಗೆ ಎಂಬನಿಲುವು ಶರಣರದ್ದಾಗಿತ್ತು. 'ಕಣ್ಣೊಳಗೆ ಕಣ್ಣಿದ್ದು ಕಾಣಲೇಕರಿಯರಯ್ಯಾ' "ಪ್ರತ್ಯಕ್ಷ ಕಂಡರೂ ಪ್ರಾಮಾಣಿಸಿ ನೋಡು" ಎಂಬ ಗಾದೆಯಂತೆ ಈ ವಚನವು. ನೋಡುವುದು ಬರಿ ಕಣ್ಣಾದರೆ ಒಳಗೊಂದು ಕಣ್ಣಿದೆ ಅದರಿಂದ ನೋಡಿ ನಿಜವನ್ನು ಅರಿಯಬೇಕಾಗಿದೆ. ಯಾರೋಬ್ಬರು ಹೇಳಿದ್ದನು ಕೇಳಿಸಿಕೊಂಡು ಮತ್ತೆರಡು ಅದಕ್ಕೆ ಹಚ್ಚಿ ಸಮಾಜ ಕಲುಸಿತಗೊಳಿಸಬಾರದು. ಒಳಕಿವಿಯಿಂದ ಅಂದರೆ

ಸತ್ಯಾಸ್ಯತೆಯನ್ನು ಅರಿತು ಕೇಳಿ ನ್ಯಾಯವನ್ನು ಒದಗಿಸುವುದು ಸಮಾಜ ಧರ್ಮ.

'ಇರುಳೆಂದೇನೊ ಕುರುಡಂಗೆ? ಹಗಲೆಂದೇನೊ ಕುರುಡಂಗೆ? ತಾಳವ ಬಾರಿಸಿದಡೇನೊ ಪಂಚಮಹಾವಾದ್ಯದ ನುಡಿಸಿದಡೇನೋ ಕಿವುಡಂಗೆ' ಕಣ್ಣುಕಾಣದ ಗಾವುಲನಿಗೆ ರಾತ್ರಿ ಆದರೇನು? ಹಗಲಾದರೇನು? ಬರಿ ತನ್ನದೆ ಲೋಕದಲ್ಲಿ ಇದ್ದು ಕೆಡಕು ಮಾಡುವವರಿಗೆ ದೇವ ಮೆಚ್ಚಲಾರ. ನಿಜವಾದ ಕುರುಡನಿಗೆ ಈ ಸಮಾಜದ ಸುಂದರವಾದ ಪರಿಕಲ್ಪನೆ ಇರುತ್ತದೆ. ಆದರೆ ಕುರುಡನಂತೆ ನಟನೆ ಮಾಡಿ ಸಮಾಜದ ಸ್ಥಿತಿ-ಗತಿಯನ್ನು ಹಾಳುಮಾಡುವವನಿಗೆ ಯಾರು ಕ್ಷಮಿಸಲಾರ. ಪಂಚಮ ವಾದ್ಯಗಳ ಜ್ಞಾನವಿಲ್ಲದವನು ಕಿವಿ ಇದ್ದರು ನಿಜವಾದ ಕಿವುಡನೆ. 'ಹೃದಯ ಕತ್ತರಿ ತುದಿನಾಲಗೆ ಬೆಲ್ಲಂ ಬೋ ಆಡಿಹೆನು ಏಂ ಬೋ ಹಾಡಿಹೆನು ಏಂ ಬೋ'! ಹೃದಯದಲ್ಲಿ ಕತ್ತರಿ, ನಾಲಿಗೆಯಲ್ಲಿ ಬೆಲ್ಲ, ಕೆಟ್ಟ ಮನೋಸ್ಥಿತಿವುಳ್ಳ ವ್ಯಕ್ತಿ ಮತ್ತೊಬ್ಬರ ಬಗ್ಗೆ ಕೆಟ್ಟ ಆಲೋಚನೆ ಮಾಡಿ, ನಾಲಿಗೆಯಿಂದ ಬೆಲ್ಲದಂತೆ ಮಾತನಾಡಿದರೆ ಏನು ಪ್ರಯೋಜನ? ಇವರು ಸಮಾಜಕ್ಕೆ ಕಂಟಕ. ಮನುಷ್ಯನು ಹೃದಯ ವೈಶಾಲ್ಯತೆದೊಂದಿಗೆ ಬದುಕಬೇಕು ಮಾತನಾಡುವ ಮಾತು ಹಿತ-ಮಿತವಾಗಿರಬೇಕು ಸಮಾಜಕ್ಕೆ ಒಪ್ಪುವಂತಿರಬೇಕು.

'ಆನೆಯನೇರಿಕೊಂಡು ಹೋದಿರೆ ನೀವು, ಕುದುರೆಯನೇರಿಕೊಂಡು ಹೋದಿರೆ ನೀವು, ಕುಂಕುಮ ಕಸ್ತೂರಿಯ ಪೂಸಿಕೊಂಡು ಹೋದಿರೆ, ಅಣ್ಣಾ ಸತ್ಯದ ನಿಲವನರಿಯದೆ ಹೋದಿರಲ್ಲಾ' ಆನೆ, ಕುದರೆ ಏರಿ ಕುಂಕುಮ ಕಸ್ತೂರಿಯ ಸುಗಂಧ ಮೈತುಂಬಾ ಬಳಿದುಕೊಂಡು ಹೋದರೆ ಆಗದು, ಸತ್ಯಾಸತ್ಯತೆಯನ್ನು ಅರಿತು ಸುಗಂಧಭರಿತ ಪರಿಮಳ ಎಂಬ ಭಕ್ತಿಯ ನಿಲುವು ಅಂತರಂಗದಲ್ಲಿ ಮೂಡಬೇಕು. ಸದ್ಗುಣವೆಂಬ ಫಲವತ್ತಾದ ಬೀಜವನ್ನು ಬಿತ್ತಬೇಕು. ಮನದ ಮೈಲಿಗೆ ತೊಳೆಯುವಂತೆ ಅಹಂಕಾರ ಅಳಿಸಿ ನಿರಹಂಕಾರ ಮನದಲ್ಲಿ ಮೂಡಬೇಕು. ಇವು ಮಾಡದಿದ್ದರೆ ವಿಧಿ ನಿಮಗೆ ಬಿಡದು. ವೇದವನೋದಿದಡೇನು? ಶಾಸ್ತ್ರವ ಕೇಳಿದಡೇನಯ್ಯಾ ಜಪವ ಮಾಡಿದಡೇನು ತಪವ ಮಾಡಿದಡೇನಯ್ಯಾ' ವೇದ ಅಧ್ಯಯನ ಶಾಸ್ತ್ರಗಳ ಅಧ್ಯಯನ, ಜಪ-ತಪಗಳನ್ನು ಮಾಡಿಯೂ ಅವುಗಳಿಗೆ ವಗ್ಗುವಂತೆ ನಡೆಯದಿದ್ದರೆ ಕೂಡಲಸಂಗಮದೇವ ಮೆಚ್ಚಲಾರನು. ವೇದ, ಶಾಸ್ತ್ರ, ಜಪ-ತಪಗಳ ಉಪಯೋಗ ಸಮಾಜದ ಎಲ್ಲ ವರ್ಗಗಳಲ್ಲಿ ಪಾವನವಾಗಿ ಚಲಿಸುವಂತಾಗಬೇಕು. ಜನರ ಮಧ್ಯ ಜ್ಞಾನ ಪಸರಿಸಬೇಕು.

'ಅಲಗಲಗು ಮೋಹಿಸಿದಲ್ಲದೆ ಕಲಿತನವ ಕಾಣಬಾರದು, ನುಡಿದ ನುಡಿ ಜಾರಿದಡೆ ಮನಕ್ಕೆ ಮನ ನಾಚಬೇಕು; ಶಬ್ದ ಲೊಟ್ಟೆಯತನದಲ್ಲಿ ಎರಿತಪ್ಪುದಯ್ಯಾ ಭಕ್ತಿ, ಪಾಪಿಯ ಕೂಸನೆತ್ತಿದಂತೆ' ಭಕ್ತಿಯಲ್ಲಿ ವಂಚನೆ ಇರಕೂಡದು ಕಣ ಕಣಗಳಲ್ಲಿಯೂ ಭಕ್ತಿ ಚಿಮ್ಮುತಲಿರಬೇಕು. ನುಡಿದ ನುಡಿ ಎಲ್ಲಯೂ ಜಾರಬಾರದು ಜಾರಿದರೆ ಮನ ನಾಚಿ ನೀರಾಗಬೇಕು. ಮಾತಾಡುವಾಗ ಎಲ್ಲಿಯೂ ತಪ್ಪಾಗಬಾರದು, ತಪ್ಪಾದರೆ ಭಕ್ತಿಯಲ್ಲಿ ಲೋಪ ಕಂಡನಂತೆ, ಪಾಪಿಯು ಕೂಸು ಎತ್ತಿಕೊಂಡನಂತೆ. 'ಬರ ಬರ ಭಕ್ತಿ ಅರೆಯಾಯಿತು ಕಾಣಿರಣ್ಣಾ, ಮೊದಲ ದಿನ ಹಣೆಮುಟ್ಟಿ, ಮರುದಿನ ಕೈ ಮುಟ್ಟಿ ಮೂರೆಂಬ ದಿನಕ್ಕೆ ತೂಕಡಿಕೆ ಕಾಣಿರಣ್ಣಾ' ಭಕ್ತನ ಭಕ್ತ ತೋರಿಕೆಯಿಂದ ಕೂಡಿರಬಾರದು. ಭಕ್ತಿ ನಿಜ ನಿಲುವಿಂದ ಕೂಡಿರಬೇಕು. ದೇವನಿಗೆ ಅರ್ಪಿತವಾಗಬೆಕು. ಮೊದಲನೆಯ ದಿನ ತಲೆ ಬಾಗಿ ಹಣೆ ಇಟ್ಟು ಎರಡನೆಯ ದಿನ ಬರಿ ಕೈಯಿಂದ ಸ್ಪರ್ಶ ಮಾಡಿ ಮೂರನೆಯ ದಿನಕ್ಕೆ ಕಾಟಾಚಾರದ ನಮಸ್ಕಾರ ಮಾಡಬಾರದು ಭಾವ ಭಕ್ತಿ ಯಾವ ಕಾರಣಕ್ಕೂ ಕಡಿಮೆ ಆಗಬಾರದು. ಅದುವೇ ನಿಜವಾದ ಭಕ್ತಿ. 'ಶಬ್ದ ಸುಖಕ್ಕೆ ಮೆಚ್ಚಿ, ಮಾತನೆ ಕೊಟ್ಟು ಕೆಟ್ಟನಯ್ಯಾ! ಅನುಭಾವ ಅಕ್ಕವೆಯಾಗದೆ, ಬೆಬ್ಬನ ಬೆರೆತನಯ್ಯಾ' 'ಹರಿವ ನದಿಯ ತೇರಿನ ಹೋಲಬಲ್ಲಡೆ ಭಕ್ತಿ, ಕೂಡಿ ಸಯದಾನವ

ನೀಡಬಲ್ಲಡೆ ಭಕ್ತಿ' ಈ ವಚನಗಳಿಗೆ ಜೇಡರ ದಾಸಿಮಯ್ಯನ ವಚನವನ್ನು ಉದಾರಿಸಬಹುದು. ಬರು ಶಠಗನ ಭಕ್ತಿ ದಿಟವೆಂದು ನೆಚ್ಚಲುಬೇಡ. ಮಠದೊಳಗಣ ಬೆಕ್ಕು ಇಲಿಯ ಕಂಡು ಪುಟನೆಗೆದಂತಾಯಿತು ಕಾಣಾ ರಾಮನಾಥ' ಮಠದಲ್ಲಿದ್ದ ಬೆಕ್ಕೊಂದು, ಮಠದ ಸನ್ಯಾಸಿಗಿಂತಲೂ ಹೆಚ್ಚು ಧ್ಯಾನಾಸಕ್ತವಾಗಿರುತ್ತದೆ. ಎಲ್ಲಿಯವರೆಗೆ ಅದರ ಧ್ಯಾನವೆಂದರೆ ಮೂಲೆಯಲ್ಲಿ ಒಂದು ಇಲಿಯನ್ನು ಕಾಣುವವರೆಗೆ. ಇಲಿಯನ್ನು ಕಂಡೊಡನೆಯೇ ಪುಟನೆಗೆಯುತ್ತದೆ ಬೆಕ್ಕು. ಆ ಬೆಕ್ಕಿನಂತಾಗಬಾರದು ಭಕ್ತಿ. ಭಕ್ತದ್ಯಾನದ ಸಾದೃಶ್ಯವನ್ನು ಅನೇಕ ಸಂದರ್ಭಗಳಲ್ಲಿ ಕೇಳಿದ್ದರೂ ಈ 'ಮಾರ್ಜಾಲಧ್ಯಾನ' ಹೊಸದು. ಸಾಧಕನನ್ನು ಪರಿಣಾಮಕಾರಿಯಾದ ರೀತಿಯಲ್ಲಿ ಎಚ್ಚರಿಸಬಹುದು. ಆಡಂಬರದಿಂದ, ಅಹಂಕಾರದಿಂದ, ಕೇವಲ ಜನಮೆಚ್ಚುಗೆಗಾಗಿ ಮಾಡುವ ಭಕ್ತಿಯನ್ನು ಖಂಡಿಸುವಲ್ಲಿ ವಚನಕಾರರ ವಚನಗಳು ಹರಿತವಾಗಿ ಮನಸ್ಸನ್ನು ಚುಚ್ಚಿ ಎಚ್ಚರಿಸುವಂತೆ ಮಾಡುತ್ತವೆ. ಎಳ್ಳಿಲ್ಲದ ಗಾಣವನ್ನಾಡಿದ ಎತ್ತಿನಂತೆ ಭಕ್ತಿಯಾಗಬಾರದು ಸದಾಚಾರದಿಂದ ಭಕ್ತಿ ಕೂಡಿರಬೇಕು.

'ಕಾಮವೇಕೋ, ಲಿಂಗಪ್ರೇಮಿಯೆನಿಸುವಂಗೆ? ಕ್ರೋಧವೇಕೋ, ಶರಣವೇಧ್ಯನೆನಿಸುವಂಗೆ? ಲೋಭವೇಕೋ, ಭಕ್ತಿಯ ಲಾಭವ ಬಯಸುವಂಗೆ? ಮೋಹವೇಕೋ, ಪ್ರಸಾದವೇಧ್ಯನೆನಿಸುವಂಗೆ?' ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ಸರ ಇವುಗಳಿಂದ ಅತೀವ ದೂರವಿರಬೇಕು ಇವೆಲ್ಲವು ಬಯಸಿದವನು ನಿಜವಾದ ಭಕ್ತನಲ್ಲ. ನಿಜವಾದ ಲಿಂಗಪ್ರೇಮಿಯೂ ಅಲ್ಲ. ನಿಜವಾದ ಭಕ್ತನ ಮನಸ್ಸು ಮತ್ತು ಹೃದಯ ಗಂಗೆಯಷ್ಟೇ ಝುಳ ಝುಳವಾಗಿರಬೇಕು. ಪಾವನ, ಪವಿತ್ರ ಶುದ್ಧ ದೈವಿ ಭಕ್ತಿವುಳ್ಳವನಾಗಿರಬೇಕು. 'ಬೇವಿನ ಬೀಜವ ಬಿತ್ತಿ; ಬೆಲ್ಲದ ಕಟ್ಟೆಯ ಕಟ್ಟಿ, ಆಕಳ ಹಾಲನೆರೆದು, ಜೇನತುಪ್ಪವ ಹೊಯ್ದಡೆ, ಸಿಹಿಯಾಗಬಲ್ಲುದೆ, ಕಹಿಯಹುದಲ್ಲದೆ?' ಬೇವು ಅತೀ ಕಹಿಯಾದದು ಅದಕ್ಕೆ ಬೆಲ್ಲದ ಕಟ್ಟೆಯನ್ನು ಕಟ್ಟಿ, ಆಕಳ ಹಾಲು ಹಾಕಿ, ಜೇನಿನ ತುಪ್ಪವ ಸುರಿದರೆ ಅದು ಎಂದು ಸಿಹಿಯಾಗದು. ಬೇವಿನಂತಹ ಗುಣವುಳ್ಳ ಮನುಷ್ಯರು ಈ ಭೂಮಿಯ ಮೇಲೆ ಬಹಳಷ್ಟು ಜನ ಇದ್ದಾರೆ. ಮೂಲತಃ ದುಷ್ಟ ಗುಣವುಳ್ಳ ಮನುಷ್ಯನನ್ನೂ ಹಾಲು ತುಪ್ಪದಲ್ಲಿ ಸ್ನಾನವನ್ನು ಮಾಡಿಸಿದರೂ ಆತನ ದುಷ್ಟ ಗುಣಗಳು ಹೋಗಲು ಸಾದ್ಯವಿಲ್ಲ 'ಬೆಲ್ಲದ ಪುತ್ಥಳಿಯ ಕೈಯಲ್ಲಿ ಹಿಡಿದು ಎಲ್ಲಿ ಚುಂಬಿಸಿದರೂ ಇನಿದಹುದು. ಬೇವಿನ ಹಣ್ಣು ಮೆಲ್ಲನೆ ತುಂಬಿಸಿದೊಡೆ ಇನಿದಹುದೇ?' ಶರಣರನ್ನು ಎಲ್ಲಿ ಚುಂಬಿಸಿದರೂ ಬೆಲ್ಲವಿದ್ದಂತೆ ಆದರೆ ದುಷ್ಟರಿಗೆ ಎಲ್ಲಿ ಚುಂಬಿಸಿದರೂ ಇನಿದಹುದೇ? ಅಂದರೆ ಬೆಲ್ಲ ಸಿಗುವುದೇ? ಸಿಗುವುದೊಂದೆ ಬೇವಿನ ಕಹಿ.

**ಉಪಸಂಹಾರ**

ಒಟ್ಟಿನಲ್ಲಿ ಶರಣರು ಪ್ರತಿಪಾದಿಸಬೇಕಾದ ಒಂದೊಂದು ವಿಷಯವನ್ನು ಅನ್ಯರ ಹೃದಯ ವೇದ್ಯವಾಗುವಂತೆ ಮಾಡುವಲ್ಲಿ ಸಫಲತೆ ಕಂಡುಕೊಂಡಿದ್ದಾರೆ. ಜೀವನದ ಆಳವಾದ ಅನುಭವ, ತೆರೆದ ಕಣ್ಣಿನಿಂದ ಸಮಾಜವನ್ನು ನೋಡುವ ಸೂಕ್ಷ್ಮದೃಷ್ಟಿ, ಬಹುಶೃತಜ್ಞಾನ ಮತ್ತು ಬಹುಮುಖವಾದ ಪ್ರತಿಭೆ, ಅಂತರಂಗದ ಜ್ಞಾನ, ಇವುಗಳಿಂದ ಅವರ ಕಲ್ಪನೆ ಅರಳಿದೆ. ಅಣ್ಣನವರ ಭಕ್ತಿಸಾಧನೆಯಲ್ಲಿ ಭಾವನೆಯ ಉದ್ವೇಗವಿದೆ. ತತ್ವಚಿಂತನೆಯ ದರ್ಶನವಿದೆ, ಲೋಕಹಿತಕ್ಕಾಗಿ ಕಾಣಬಲ್ಲ ಅನುಕಂಪದ ಮಿಡಿತವಿದೆ, ಅವರ ಭಕ್ತಿ ಕೇವಲ ಭಾವಾವೇಶದ ಹುಚ್ಚು ಹೊಳೆಯಲ್ಲ, ಅವು ಅಪಾರ ತತ್ವಾನುಭವದ ದರ್ಶನ ದೀಪ್ತಿವಾಗಿವೆ. ಬುದ್ದಿಯ ಬೆಳಕಿನ ಭಾವನೆಗಳಿಂದ ಪಳಗಿಸಿ, ಪರಿಶುದ್ದಗೊಳಿಸಿ, ನಿಶ್ಚಿತ ಗುರಿಯ ಕಡೆಗೆ ಹರಿಯ ಬಿಟ್ಟಿರುವ ಸಂಯಮದ ಗಂಭೀರವಾಹಿನಿಯಾಗಿದೆ. ಅವರ ಭಕ್ತಿ ಮಾರ್ಗ ಅದು ಕೂಡಲಸಂಗನೆಂಬ ಸಾಗರವನ್ನು ಸೇರಿ ತಾನು ಸಾಗರವಾಗಿ ಪರಿಣಮಿಸಿದೆ.

**ಪರಾಮರ್ಶನ/ಆಕರ ಗ್ರಂಥಗಳು**


- ಭೂಸನೂರಮಠ, ಸಂ.ಶಿ. (2007). *ಶೂನ್ಯ ಸಂಪಾದನೆಯ ಪರಾಮರ್ಶೆ*. ಅಭಿನವ ಪ್ರಕಾಶನ.
- ರಂಜಾನ್ ದರ್ಗಾ. *ಶರಣ ಸಂಸ್ಕೃತಿ*. ಕನ್ನಡ ಸಾಹಿತ್ಯ ಪರಿಷತ್ತು.
- ತಿಪ್ಪೇರುದ್ರಸ್ವಾಮಿ ಎಚ್. (2016). *ವಚನಗಳಲ್ಲಿ ವೀರಶೈವ ಧರ್ಮ*. ಡಿ.ವಿ.ಕೆ ಮೂರ್ತಿ.
- ತಿಪ್ಪೇರುದ್ರಸ್ವಾಮಿ, ಎಚ್. (2019). *ಶರಣರ ಅನುಭಾವ ಸಾಹಿತ್ಯ*. ಡಿ.ವಿ.ಕೆ ಮೂರ್ತಿ.
- ವಿದ್ಯಾಶಂಕರ ಎಸ್ (ಸಂ.) (2020). *ವೀರಶೈವ ಪುರಾಣಗಳು*. ಕನ್ನಡ ಸಾಹಿತ್ಯ ಪರಿಷತ್ತು.